ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಎಷ್ಟು ಮಂಡಲ ಪಂಚಾಯಿತಿಗಳಲ್ಲಿ ಗ್ರಂಥಾಲಯಗಳನ್ನು ತೆರೆಯಲಾಗಿದೆ?

ಇ) ಈ ಗ್ರಂಥಾಲಯಗಳಲ್ಲಿ ಒಟ್ಟು ಎಷ್ಟು ಜನ ಮೇಲ್ವಿಚಾರಕರು ಕೆಲಸ ಮಾಡುತ್ತಿದ್ದಾರೆ ಹಾಗೂ ಅವರಿಗೆ ನೀಡುತ್ತಿರುವ ಗೌರವ ವೇತನ ಎಷ್ಟು?

ಈ) ಈ ಗೌರವ ವೇತನವನ್ನು ಹೆಚ್ಚಿಸುವ ಪ್ರಸ್ತಾವನೆ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಫ್ರೌಢ ಶಿಕ್ಷಣ ಸಚಿವರು):-

ಆ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

ಆ) ಇಲ್ಲಿಯವರೆಗೆ 1051ಗ್ರಾಮ ಪಂಚಾಯಿತಿಗಳಲ್ಲಿ (ಮಂಡಲ) ಗ್ರಂಥಾಲಯಗಳನ್ನು ತೆರೆಯಲಾಗಿದೆ.

ಇ) ಒಟ್ಟು 1051 ಮೇಲ್ವಿಚಾರಕರು ಕೆಲಸ ಮಾಡುತ್ತಿದ್ದಾರೆ. ಪ್ರತಿ ಮೇಲ್ವಿಚಾರಕರಿಗೆ ತಿಂಗಳಿಗೆ ಗೌರವ ಸಂಭಾವನೆ ಆಧಾರದ ಮೇರೆಗೆ ರೂ.500.00 ಗಳಂತೆ ನೀಡಲಾಗುತ್ತಿದೆ.

ಈ) ಗೌರವ ವೇತನ ಹೆಚ್ಚಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ವಿಷಯ:- ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 281(213)

ಶ್ರೀ ಜಯಪ್ರಕಾಶ್ ನಾರಾಯಣ್(ಯಲಹಂಕ):- ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳೆಷ್ಟು?

ಆ) ಈ ಶಿಕ್ಷಣ ಸಂಸ್ಥೆಗಳಲ್ಲಿ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಆದೇಶಕ್ಕನುಗುಣವಾಗಿ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಗೊತ್ತು ಮಾಡಿರುವ ಪ್ರಮಾಣದಲ್ಲಿ ನೇಮಕ ಮಾಡಲಾಗಿದೆಯೇ?

ಇ) ಯಾವ ಯಾವ ವರ್ಗದಲ್ಲಿ ಎಷ್ಟೆಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ, ಭರ್ತಿ ಮಾಡದೆ ಖಾಲಿಯಿರುವ ಹುದ್ದೆಗಳೆಷ್ಟು?

ಈ) ಈ ಹುದ್ದೆಗಳನ್ನು ಭರ್ತಿ ಮಾಡುವಾಗ ಯಾವ ಯಾವ ವಿದ್ಯಾ ಸಂಸ್ಥೆಗಳು ರೋಸ್ಟರ್ ಪದ್ದತಿಯನ್ನು ಅನುಸರಿಸಿ ನೇಮಕ ಮಾಡಲು ಸೂಚನೆ ನೀಡಲಾಗಿದೆಯೆ?

ಉ) ಹಾಗಿದ್ದಲ್ಲಿ ಪರಿಶಿಷ್ಟ ಜಾತಿಯ:ಪರಿಶಿಷ್ಟ ಪಂಗಡದ ನೇಮಕಾತಿಯ ಪ್ರಮಾಣವೆಷ್ಟು(ಇದರ ಪೂರ್ಣ ವಿವರ ಒದಗಿಸುವುದು)?

ಶ್ರೀ ಎ.ಬಿ.ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು):-

ಅ) ಸರ್ಕಾರಿ 4 ವೈದ್ಯಕೀಯ ಮಹಾವಿದ್ಯಾಲಯಗಳು
ಖಾಸಗೀ 15 ವೈದ್ಯಕೀಯ ಮಹಾವಿದ್ಯಾಲಯಗಳು

ಆ) ಇಲ್ಲಾ - ಕೆಲವು ಸಂಸ್ಥೆಗಳಲ್ಲಿ ಕೆಲವು ಹುದ್ದೆಗಳು ಖಾಲಿ ಇವೆ.

ಇ)

ವಿದ್ಯಾಲಯ	ಪ್ರಾಧ್ಯಾಪಕರು			ಸಹಪ್ರಾಧ್ಯಾಪಕರು			ಉಪನ್ಯಾಸಕರು		
	ಮಂ.	ಕಾ.	ಖಾಲಿ	ಮಂ.	ಕಾ.	ಖಾಲಿ	ಮಂ.	ಕಾ.	ಖಾಲಿ
ಬಿಎಂಸಿ. ಬೆಂ	86	82	4	95	73	22	158	118	40
ಎಂಎಂಸಿ. ಮೈ.	50	42	8	57	37	20	102	60	42
ಕೆಎಂಸಿ. ಹು	46	33	13	58	38	20	105	72	33
ಜಿಎಂಸಿ. ಬಳ್ಳಾರಿ	44	31	13	42	27	15	85	34	51
ಒಟ್ಟು	223	188	38	252	175	77	450	284	166

ಒಟ್ಟು 226 ಪ್ರಾಧ್ಯಾಪಕರ ಹುದ್ದೆಗಳು ಮಂಜೂರಾಗಿದ್ದು, 188 ಪ್ರಾಧ್ಯಾಪಕರು ಸೇವೆ ಸಲ್ಲಿಸುತ್ತಿದ್ದಾರೆ. 38 ಪ್ರಾಧ್ಯಾಪಕರ ಹುದ್ದೆ ಖಾಲಿ ಇವೆ.

ಒಟ್ಟು 252 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು ಮಂಜೂರಾಗಿದ್ದು 175 ಸಹಾಯಕ ಪ್ರಾಧ್ಯಾಪಕರು ಸೇವೆ ಸಲ್ಲಿಸುತ್ತಿದ್ದಾರೆ, 77 ಖಾಲಿ ಇವೆ.

ಒಟ್ಟು 450 ಉಪನ್ಯಾಸಕರ ಹುದ್ದೆಗಳು ಮಂಜೂರಾಗಿದ್ದು 284 ಉಪನ್ಯಾಸಕರು ಸೇವೆ ಸಲ್ಲಿಸುತ್ತಿದ್ದು 166 ಖಾಲಿ ಇವೆ.

ಖಾಸಗೀ ಕಾಲೇಜುಗಳ ಹುದ್ದೆಗಳ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.

ಈ) ಸರ್ಕಾರಿ ವೈದ್ಯಕೀಯ ಮಹಾ ವಿದ್ಯಾಲಯಗಳಲ್ಲಿ ಎಲ್ಲಾ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಮತ್ತು ಶೇಕಡಾ 50ರಷ್ಟು ಸಹಾಯಕ ಪ್ರಾದ್ಯಾಪಕರ ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದಿಂದ ಸರ್ಕಾರದ ಮೀಸಲಾತಿಗೆ ಅನುಗುಣವಾಗಿ ರೋಸ್ಟರ್ ಪದ್ಧತಿಯನ್ನು ಅನುಸರಿಸಿ ಆಯ್ಕೆ

ಮಾಡಲಾಗುವುದು. ಪ್ರಾಧ್ಯಾಪಕರ ಎಲ್ಲಾ ಹುದ್ದೆಗಳನ್ನು ಪದೋನ್ನತಿಯಿಂದ ತುಂಬಲಾಗುವುದು.

ಖಾಸಗೀ ಸಂಸ್ಥೆಗಳ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ. ಹಾಗೂ ಸರ್ಕಾರಿ ಅನುದಾನ ಪಡೆಯದ ಸಂಸ್ಥೆಗಳಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸಬೇಕೆಂದು ಸರ್ಕಾರಿ ನಿಯಮವಿಲ್ಲ. ಈ ವಿಷಯವು ಆಯಾ ಸಂಸ್ಥೆಗಳ ಆಡಳಿತ ಮಂಡಳಿಗಳ ವಿವೇಚನೆಗೆ ಒಳಪಟ್ಟಿರುತ್ತದೆ.

ಊ) ಕಾಲಕಾಲಕ್ಕೆ ಜಾರಿಯಲ್ಲಿರುವ ಸರ್ಕಾರದ ಮೀಸಲಾತಿ ನಿಯಮಗಳಿಗೆ ಅನುಗುಣವಾಗಿ ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆ ಮಾಡುವುದರಿಂದ ಸರ್ಕಾರಿ ಸಂಸ್ಥೆಗಳ ಎಲ್ಲಾ ಉಪನ್ಯಾಸಕರುಗಳ ಶೇ100 ಸಹಾಯಕ ಪ್ರಾಧ್ಯಾಪಕರ (ಶೇ50) ಹುದ್ದೆಗಳಿಗೂ ಈ ಕೆಳಕಂಡಂತೆ ಪ.ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಹ ವೈದ್ಯರನ್ನು ಆಯ್ಕೆ ಮಾಡಲಾಗುತ್ತದೆ.

1) ಪರಿಶಿಷ್ಟ ಜಾತಿ - 15ಶೇಕಡ ಸರ್ಕಾರಿ ಸಂಸ್ಥೆ
2) ಪರಿಶಿಷ್ಟ ಪಂಗಡ - 3ಶೇಕಡ ಗಳಲ್ಲಿ

ಖಾಸಗೀ ಸಂಸ್ಥೆಗಳ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.

ವಿಷಯ:- ರಾಜ್ಯದಲ್ಲಿ ಅಕ್ರಮವಾಗಿ ಮೂತ್ರಪಿಂಡ ವರ್ಗಾವಣೆ ಮಾಡಿರುವ ಪ್ರಕರಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 282(11)

ಶ್ರೀ ಎಂ.ಹೆಚ್.ಜಯಪ್ರಕಾಶ್ ನಾರಾಯಣ್(ಯಲಹಂಕ):- ಮಾನ್ಯ ವೈದ್ಯಕೀಯ